ದಿನಾಂಕ 31.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಕೆ.ಜಿ.ಎ ರವರಿಂದಃ-**

ನಿಶಾನೆ ಪಿ-3 ರ ಫೋಟೋದಲ್ಲಿ ಕಾಣುವ ಮನೆ ಯಾವ ಸರ್ವೆ ನಂಬರ್ ನ ಸ್ವತ್ತಿನಲ್ಲಿ ಇದೆ ಎಂಬುದು ನನಗೆ ಗೊತ್ತಿಲ್ಲ. ಸದರಿ ಮನೆಯನ್ನು ನಿರ್ಮಿಸಲು ಪರವಾನಗಿಯನ್ನು ನನ್ನ ಮಗನ ಹೆಸರಿನಲ್ಲಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಿಂದ ಪಡೆಯಲಾಗಿರುತ್ತದೆ. ಪರವಾನಗಿಯನ್ನು ನಾನು ನನ್ನ ಹೆಸರಿನಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ನನಗೆ ಈಗ ನೆನಪಿಲ್ಲ.

ಅಸಲು ದಾವಾ ಸಂಖ್ಯೆ 23/2011 ನ್ನು ವಾದಿಯು ನನ್ನ ಮತ್ತು ಈ ದಾವೆಯ ಪ್ರತಿವಾದಿಗಳ ವಿರುದ್ಧ ಸರ್ವೆ ನಂ. 7/2 ರ ಸ್ವತ್ತಿಗೆ ಸಂಬಂಧಿಸಿದಂತೆ ಪೊನ್ನಂಪೇಟೆಯ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾಖಲಿಸಿದ್ದರು ಎಂದರೆ ಸರಿ. ಸದರಿ ದಾವೆಯು ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಸದರಿ ಆದೇಶವನ್ನು ನಾವು ಮೇಲ್ಮನವಿ ಸಂಖ್ಯೆ ಆರ್.ಎ ನಂ. 21/2013 ನ್ನು ದಾಖಲಿಸಿದ್ದೆವು ಎಂದರೆ ಸರಿ. ಸದರಿ ಮೇಲ್ಮನವಿಯು ಪುರಸ್ಕೃತವಾಗಿರುತ್ತದೆ ಎಂದರೆ ಸರಿ.

ಸರ್ವೆ ನಂ. 7/2 ನಾಗಯ್ಯರವರ ಹಿಸ್ಸೆಗೆ ಹೋಗಿರುವ ಸ್ವತ್ತು ಎಂದರೆ ಸರಿಯಲ್ಲ. ನಾಗಯ್ಯರವರು ಮೃತರಾದ ಬಳಿಕ ಅವರ ಮಕ್ಕಳು ಸದರಿ ಸ್ವತ್ತಿನ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಇತರೆ ಸಹೋದರರು ಉನ್ನತ ಶ್ರೇಣಿಯ ಉದ್ಯೋಗದಲ್ಲಿ ಇದುದ್ದರಿಂದ, ಗ್ರಾಮದಲ್ಲಿಯೇ ನೆಲೆಸಿದ್ದ ನಾಗಯ್ಯರವರು ಮನೆಯ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಮನೆಯ ವ್ಯವಹಾರಗಳನ್ನು ನೋಡಿಕೊಳ್ಳುವ ಉದ್ದೇಶದಿಂದ ಅವರು ಉದ್ಯೋಗವನ್ನು ತೊರೆದು ಬಂದಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನನಗೆ ಮತ್ತು ಇತರೆ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>- ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.

ಓಎಸ್. **165/2016**
ಡಿಡಬ್ಲ್ಯು-1